# ಮೇ ದಿನಾಚರಣೆ

ಬೇಸಿಗೆ ಬಂತೆಂದರೆ ದಿನಾಚರಣೆಗಳ ಸುಗ್ಗಿಯ ಕಾಲ. ಸಾಮಾನ್ಯವಾಗಿ ಕೃಷಿ ಕಾರ್ಮಿಕರಿಗೆ ವಿಶ್ರಾಂತಿ ಹೊತ್ತು. ಮೇ ತಿಂಗಳ ಮೊದಲ ತೇದಿಯಂದೇ ಕಾರ್ಮಿಕರ ದಿನಾಚರಣೆ.

ಕಾರ್ಮಿಕರ ದಿನಕ್ಕೆ ಚಾರಿತ್ರಿಕ ಮಹತ್ವ ಇದೆ. ಇಲ್ಲಿಯವರೆಗೆ ದುಡಿಯುವ ಜನರನ್ನು ಅವರು ಮಾಡುವ ಕೆಲಸಕ್ಕಾಗಿ ಗೌರವಿಸುವ ಯಾವ ಪರ್ವಗಳು ಇರಲಿಲ್ಲ. ಸಂತ–ಮಹಂತರು, ಹಲವಂದದ ಸಾಧನೆಗೈದ್ಯ ಜನರ ನೆನಪಿಗಾಗಿ ಆಚರಣೆಗಳು ಕಾಲಾನುಕಾಲದಿಂದಲೂ ಆಚರಿಸಿಕೊಂಡು ಬರುತ್ತಲೆ ಇದ್ದವು. ಅಲ್ಪ, ಸ್ವಲ್ಪ ಸಾಧನೆ ಮಾಡಿದವರ ಗುಣಗಾನಗಳು ನಡೆದೆ ಇದ್ದವು. ಆದರೆ ಜಗತ್ತಿನ ಸಂಪತ್ತನ್ನು ಹೆಚ್ಚು ಮಾಡುವ ಶ್ರಮಿಕರ ಘನತೆ–ಗೌರವ ಎತ್ತಿ ಹಿಡಿಯುವ ತನ್ಮೂಲಕ ಅವರ ಕೊಡುಗೆಯನ್ನು ಶ್ಲಾಘಿಸುವ ಯಾವುದೇ ಪರ್ವಗಳು ಇರಲಿಲ್ಲ. 18ನೇ ಶತಮಾನದ ಆದಿಯಲ್ಲಿ ಔದ್ಯಮಿಕ ಕ್ರಾಂತಿ ಸಂಭವಿಸಿದ ಹಿನ್ನೆಲೆಯಲ್ಲಿ ಜಗತ್ತಿನ ಕಾರ್ಮಿಕರಲ್ಲಿ ಸಂಚಲನ ಮೂಡಿತು. ಮೊದಲ ಬಾರಿಗೆ ಜಗತ್ತು ನಿಂತಿರುವುದೇ ದುಡಿಯುವವರ ಮೇಲೆ ಎಂಬ ಸತ್ಯವನ್ನು ಸಮಾಜವಾದಿ ಚಿಂತಕ ಕಾರ್ಲ್ ಮಾರ್ಕ್ಸ್ ತನ್ನ ಅಮೂಲ್ಯವಾದ ಕೃತಿ 'ಬಂಡವಾಳ'ದಲ್ಲಿ ತೋರಿಸಿದ. ಪಂಚ ಮಹಾಭೂತಗಳಿಂದ ಆವೃತವಾದ ಭೂಮಂಡಲದಲ್ಲಿ ಎಲ್ಲವೂ ಕಚ್ಚಾ ವಸ್ತುವಾಗಿಯೇ ಬಿದ್ದಿರುತ್ತದೆ. ಮಣ್ಣು, ಮರ, ನೀರು, ನೆಲ, ಖನಿಜ, ಗಾಳಿ, ಬೆಳಕು, ಅರಣ್ಯ, ಪಶು, ಪಕ್ಷಿ ಇತ್ಯಾದಿ ಎಲ್ಲವೂ ತನ್ನ ಸ್ವಸ್ವರೂಪದ ರೂಕ್ಷ ಸ್ಥಿತಿಯಲ್ಲಿ ಇರುತ್ತವೆ. ಈ ಎಲ್ಲ ವಸ್ತು ಚೈತನ್ಯಗಳನ್ನು ಗುರುತಿಸಿ ಅವುಗಳನ್ನು ಬಳಸಿಕೊಂಡು ಸಂಸ್ಕರಿಸಿ ಉಪಯೋಗಿ ವಸ್ತುಗಳನ್ನಾಗಿ ಮಾಡುವವರು ಶ್ರಮಿಕರು. ವಿಶ್ವದಲ್ಲಿ ಎರಡು ಸಂಪತ್ತುಗಳು ಮಾತ್ರ ಇವೆ. ಒಂದು ನೈಸರ್ಗಿಕ ಸಂಪತ್ತು. ಅದನ್ನು ಬಳಸಿಕೊಂಡು ಸಿದ್ಧವಾಗುವ ಉಪಕರಣ ಸಂಪತ್ತು ಇನ್ನೊಂದು. ಇದನ್ನು ಸಿದ್ಧಪಡಿಸುವವರು ಮನುಷ್ಯರು. ಶ್ರಮಿಕರು ಬೆವರು ಸುರಿಸುವ ಮೂಲಕವೇ ವಸ್ತುಗಳು ತಯಾರಾಗುತ್ತವೆ. ಪಶು ಸಂಗೋಪನೆ, ಕೃಷಿಕೃತ್ಯ, ಕಾರ್ಖಾನೆಯಲ್ಲಿ ದುಡಿತ ಎಲ್ಲೆಲ್ಲೂ ದುಡಿಯುವ ಕೈಗಳೇ ಬೇಕು. ಭವ್ಯ ದಿವ್ಯ ಮಂದಿರ, ಮಸೀದಿ, ಚರ್ಚ್, ಗುರುದ್ವಾರ ನಿರ್ಮಿಸಿದವರು ಶ್ರಮಿಕರೆ.

ಪರಮ ಪವಿತ್ರ ಅಥವಾ ಕಲಾತ್ಮಕ ಅರಮನೆ–ಗುರುಮನೆಗಳು ಕೂಡ ಶ್ರಮಿಕರ ಬೆವರಿನಿಂದಲೆ ಎದ್ದು ನಿಂತಿವೆ. ನಾಗರಿಕತೆ ಎಂಬ ಅವಸ್ಥೆಗೆ ಶ್ರಮಿಕರ ಬೆವರೇ ಬುನಾದಿ. ಹೀಗಿರುವಾಗಲೂ ಶ್ರಮಿಕರನ್ನು ಸಮಾಜ ಯಾವತ್ತೂ ಗೌರವಿಸಲಿಲ್ಲ. ಅಸಲಿಗೆ ಮಾನವರು ಸೂತ್ರದ ಗೊಂಬೆಗಳು ಆಡಿಸುವಾತ ಮೇಲೊಬ್ಬನಿದ್ದಾನೆ. ಅವನ ಸಂಕಲ್ಪ, ವಿಕಲ್ಪದಿಂದಲೇ ಜಗತ್ತು ನಡೆದಿದೆ. ಆತನಿಗೆ ಶರಣು ಹೋಗಿರಿ ಎಂದು ಜನರ ಶ್ರಮವನ್ನು ಆಮೂಲವಾಗಿ ನಿರಾಕರಿಸಲಾಯಿತು. ದುಡಿಯುವವರ ಶ್ರಮದ ಮೇಲೆ ಸವಾರಿ ಮಾಡುವ ವರ್ಗವು ವಾಸ್ತವ ಜಗತ್ತಿನ ಆಗು–ಹೋಗುಗಳನ್ನು ದೈವೀಕರಿಸಿ ದುಡಿಯುವವರ ಬಗೆಗೆ ಲಕ್ಷ ಹೋಗದಂತೆ ಮಾಡಿತು. ಮಾನವರ ನೈತಿಕತೆಯನ್ನು ಕೇಂದ್ರವಾಗಿಟ್ಟುಕೊಂಡು ಆಳುವವರ ಮನಪರಿವರ್ತನೆಗೆ ಒತ್ತು ನೀಡಿದರು. ಇದು ಸಾಧು ಮಾರ್ಗವೆನಿಸಿಕೊಂಡಿತ್ತಾದರೂ ಸಾಧಿತವಾಗುವ ಬಟ್ಟೆಯಾಗಿರಲಿಲ್ಲ. ಹೀಗಾಗಿಯೇ ವಿಶ್ವದಾದ್ಯಂತ ಕಾಲಕಾಲಕ್ಕೂ ನೂರಾರು ದಾರ್ಶನಿಕರು, ಸುಧಾರಣಾವಾದಿಗಳು ಗತಿಸಿಹೋಗಿದ್ದರೂ ಶ್ರಮಿಕರ ಬಾಳಿನಲ್ಲಿ ಹೇಳಿಕೊಳ್ಳುವ ಪರಿವರ್ತನೆಯಾಗಲೇ ಇಲ್ಲ.

ವಿಶ್ವದಲ್ಲಿ ಮೊದಲ ಬಾರಿಗೆ ಕಾರ್ಲ್ ಮಾರ್ಕ್ಸ್ ಮತ್ತು ಫೆಡ್ರಿಕ್ ಏಂಗೇಲ್ಸ್‌ರಂಥ ತತ್ವಜ್ಞಾನಿಗಳು ಪ್ರತಿಪಾದಿಸಿದ್ದೇನೆಂದರೆ ಆಳುವವರ ಮನಪರಿವರ್ತನೆಯು ನೀತಿ ಪಾಠದಿಂದ ಆಗದು. ಮಾನವರ ಚರಿತ್ರೆಯು ವರ್ಗ ಸಂಘರ್ಷದಿಂದ ಕೂಡಿದೆ, ದುಡಿಯುವವರ ಮತ್ತು ದುಡಿಸಿಕೊಳ್ಳುವವರ ನಡುವೆ ನಿರಂತರ ಸಂಘರ್ಷ ಇದೆ. ಇದಕ್ಕೆ ಸಾಂಘಿಕ ಶಕ್ತಿ ಸಂಚಯದ ಅವಶ್ಯಕತೆ ಇದೆ ಎಂಬುದನ್ನು ತೋರಿಸಿಕೊಟ್ಟರಲ್ಲದೆ ಶ್ರಮಿಕರು ತಮ್ಮ ಶ್ರಮ ಶಕ್ತಿಯ ಮಹತ್ವವನ್ನು ಅರಿಯುವ ಮೂಲಕ ತಮ್ಮ ಹಕ್ಕನ್ನು ಪಡೆದುಕೊಳ್ಳಲು ಹೋರಾಟ ನಡೆಸಬೇಕು. ಸಮರಧೀರ ಹೋರಾಟದಿಂದಲ್ಲದೆ ಜಗತ್ತಿನಲ್ಲಿ ಯಾವುದೇ ಬಗೆಯ ಶೋಷಣೆ ನಿಲ್ಲದು ಎಂಬುದನ್ನು ಸಾಧಾರವಾಗಿ ತೋರಿಸಿಕೊಟ್ಟರಲ್ಲದೆ ಜನರನ್ನು ಹೋರಾಟಕ್ಕೆ ಅಣಿನೆರೆಸಿದರು.

ಜಗತ್ತಿನ ಕಾರ್ಮಿಕರೆ ಒಂದಾಗಿರಿ ಹೋರಾಟಕ್ಕೆ ಮುಂದಡಿಯಿಡಿರಿ. ನಿಮ್ಮಲ್ಲಿ ಕಳೆದುಕೊಳ್ಳಲು ಬೇಡಿಗಳ (ಸಂಕೋಲೆ) ಹೊರತು ಬೇರೇನೂ ಇಲ್ಲ ಎಂದು ಬಡಿದೆಬ್ಬಿಸಿದರು. ತತ್ಪರಿಣಾಮವಾಗಿ 1886ರ ಮೇ ತಿಂಗಳಲ್ಲಿ ಅಮೆರಿಕದ ಚಿಕಾಗೊ ನಗರದ ಹೇಮಾರ್ಕೆಟ್ ಎಂಬಲ್ಲಿ ದಿನಕ್ಕೆ 15–16 ಗಂಟೆಗಳವರೆಗೆ ಅಮಾನವೀಯ ಪರಿಸ್ಥಿತಿಯಲ್ಲಿ ದುಡಿಯುತ್ತಿದ್ದ ಕಾರ್ಮಿಕರು 8 ತಾಸಿನ ದುಡಿಮೆಯ ಬೇಡಿಕೆಗಾಗಿ ಹೋರಾಟ ನಡೆಸಿದರು. ಪೊಲೀಸರು ಮತ್ತು ಕಾರ್ಮಿಕರ ನಡುವೆ ಸಂಘರ್ಷ ಉಂಟಾಯಿತು. ತಮ್ಮ 8 ತಾಸಿನ ದುಡಿಮೆಯ ಹಕ್ಕನ್ನು ಪಡೆದುಕೊಂಡರು. ದಿನದ 24 ತಾಸುಗಳಲ್ಲಿ 8 ತಾಸು ದುಡಿಮೆ, 8 ತಾಸು ನಿದ್ದೆ, 8 ತಾಸು ಮನೋರಂಜನೆ ಹೀಗೆ ವೈಜ್ಞಾನಿಕ ಸಿದ್ಧಾಂತವೊಂದನ್ನು ಪ್ರತಿಪಾದಿಸಿ ಗೆದ್ದಿದ್ದರು.

ಈ ವಿಜಯದ ನೆನಪಿಗಾಗಿ 1889ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಸಮಾಜವಾದಿ ಸಮ್ಮೇಳನದಲ್ಲಿ ಮೇ 1ರಂದು ಕಾರ್ಮಿಕರ ದಿನ ಆಚರಿಸಲು ನಿರ್ಧರಿಸಲಾಯಿತು. 1890ರಿಂದ ಜಗತ್ತಿನಾದ್ಯಂತ ಈ ದಿನವನ್ನು ಅಧಿಕೃತವಾಗಿ ಆಚರಿಸಲು ಪ್ರಾರಂಭಿಸಲಾಯಿತು. 1923ರಲ್ಲಿ ಭಾರತದಲ್ಲಿಯೂ ಮೊದಲ ಬಾರಿಗೆ ಮೇ ದಿನಾಚರಣೆಯನ್ನು ಚೆನ್ನೈನಲ್ಲಿ ಮಾಡಲಾಯಿತು. 'ಲೇಬರ್ ಕಿಸಾನ್ ಪಾರ್ಟಿ ಆಫ್ ಹಿಂದೂಸ್ತಾನ' ಸಂಘಟನೆಯ ನಾಯಕರಾದ ಮಲಯಪುರಂ ಸಿಂಗಾರವೇಲು ಚೆಟ್ಟಿಯಾರ್ ಅವರು ಇದನ್ನು ಆಯೋಜಿಸಿದ್ದರು.

1923ರಿಂದ ಇಲ್ಲಿಯವರೆಗೆ ಈ ನಿಯಮವು ವಿಶ್ವದಾದ್ಯಂತ ಜಾರಿಯಾಗಿತ್ತು. ದುರಂತವೆಂದರೆ ಈಗ ಹೊಸ ಆರ್ಥಿಕ ನೀತಿಯ ಪ್ರಾಯೋಜಕರಾದ ಬೃಹತ್ ಬಂಡವಾಳಶಾಹಿಗಳು ಕಾರ್ಮಿಕರು ದಿನಕ್ಕೆ 16 ತಾಸು ದುಡಿಯಬೇಕು ಎಂದು ಫರಮಾನು ಹೊರಡಿಸಿದ್ದಾರೆ. ಐಟಿ, ಟೆಕ್ಕಿಗಳ ದುಡಿಯುವ ಅವಧಿಯು ವರ್ಕ್ ಫ್ರಂ ಹೋಂ ಎಂಬ ಆಕರ್ಷಕ ಶೀರ್ಷಿಕೆ ಅಡಿಯಲ್ಲಿ ಹಗಲು ರಾತ್ರಿಗಳ ಹಂಗಿಲ್ಲದೆ 10–15 ತಾಸಿಗೆ ಏರಿದೆ. ಟೆಕ್ಕಿ ಎಂಬ ಕಾರ್ಮಿಕರಿಗೆ ತಮ್ಮ ಇರುವಿಕೆ–ಆಗುವಿಕೆಯ ಅರಿವಿರದಂತೆಯೂ ಅಸಲಿಗೆ ಅವರು ಎಲ್ಲಿಯೂ ಸಂಘಟಿತರಾಗದಂತೆ ಮಾಡಲಾಗಿದೆ. ಕಾರ್ಮಿಕರು 8 ತಾಸಿನ ದುಡಿಮೆ ಹಕ್ಕು ಪಡೆದುಕೊಂಡು ಒಂದೇ ಶತಮಾನದಲ್ಲಿ ಅದನ್ನು ಬುಡಮೇಲು ಮಾಡುತ್ತಿದ್ದಾರೆ. ಪರಂಪರಾಗತ ಕಾರ್ಮಿಕರಿಗಿಂತ ಭಯಂಕರವಾದ ಕೆಲಸದ ಒತ್ತಡಕ್ಕೆ ಒಳಗಾಗುತ್ತಿದ್ದರೂ ಇವರಿಗೆ ಅದರ ಅರಿವೆಯಾಗದಂಥ ಕೋಮಾದಲ್ಲಿ ಅವರನ್ನು ಇಡಲಾಗಿದೆ. ಈಗ ಮೇ ದಿನಾಚರಣೆ ಎಂಬುದು ಕೇವಲ ಸಂಪ್ರದಾಯವಾಗಿ ಮಾತ್ರ ಮುಂದುವರೆಯಬೇಕೆ? ಅಥವಾ ಎಲ್ಲ ವಿಧದ ಕಾರ್ಮಿಕರು ಮತ್ತೊಮ್ಮೆ ಜಗತ್ತಿನಾದ್ಯಂತ ಪುಟಿದು ನಿಲ್ಲಬೇಕೆ? ಆತ್ಮವಿಮರ್ಶೆ ಮಾಡಿಕೊಳ್ಳಬೇಕಿದೆ.

■ **ಮೀನಾಕ್ಷಿ ಬಾಳಿ**

## ಮಾತೇ ಮುತ್ತು

- 'ನಮ್ಮನ್ನು ಪ್ರೀತಿಸುವವರಿದ್ದಾರೆ' ಎನ್ನುವ ನಂಬಿಕೆಯೇ ಜೀವನದ ಅತ್ಯಂತ ಹೆಚ್ಚಿನ ಸುಖ.
  —ವಿಕ್ಟರ್ ಹ್ಯೂಗೊ
- ಕೋಪವನ್ನು ನಿಯಂತ್ರಿಸದಿದ್ದರೆ ಅದು ನಮ್ಮ ಮನಸ್ಸಿನ ಜ್ಯೋತಿಯನ್ನು ನಂದಿಸಿಬಿಡುತ್ತದೆ.
  —ಇಂಗರ್ ಸಾಲ್
- ತಿಳಿದವಗೆ ಜಗವೆಲ್ಲ ರಸದ ಊಟ.
  —ಜಿ.ಎಸ್. ಶಿವರುದ್ರಪ್ಪ
- ಯಾವ ವಿಶ್ವವಿದ್ಯಾಲಯವೂ ಕಲಿಸಲಾರದಷ್ಟು ಪಾಠವನ್ನು ಬಡತನ ಕಲಿಸುತ್ತದೆ.
  —ಅನಕೃ
- ಲೋಕದಲ್ಲಿ ಯಾವ ಮಾನವನೂ ಪೂರ್ಣ ಸುಖಿಯೂ ಅಲ್ಲ. ಪೂರ್ಣ ದುಃಖಿಯೂ ಅಲ್ಲ.
  —ಗೌತಮ ಬುದ್ಧ
- ಸತ್ಯಕ್ಕಾಗಿ ಯಾವುದನ್ನಾದರೂ ತ್ಯಾಗ ಮಾಡಿ ಬಿಡಿ. ಆದರೆ, ಸತ್ಯವನ್ನು ಮಾತ್ರ ತ್ಯಾಗ ಮಾಡಬೇಡಿ.
  —ಸ್ವಾಮಿ ವಿವೇಕಾನಂದ
- ಸುಖವನ್ನು ಸಹಿಸುವ ಶಕ್ತಿ ಒಬ್ಬನಿಗಿದ್ದರೆ ದುಃಖವನ್ನು ಸಹಿಸುವ ಶಕ್ತಿ ನೂರಾರು ಮಂದಿಗಿರುತ್ತದೆ.
  —ಥಾಮಸ್ ಕಾರ್ಲೈಲ್